## ಶಿಲ್ಪ, ಪ್ರಕೃತಿಯ ಸಮಾಗಮ

# ಉನಕೋಟಿ

**ಕೆ.ಆರ್.ಉಮಾದೇವಿ ಉರಾಳ**
ಚಿತ್ರಗಳು: ಕೆ.ಎನ್.ಉರಾಳ್



**ಈ** ಶಿವ ಸನ್ನಿಧಿಗೆ ಗುಡಿಯಿಲ್ಲ, ಗೋಪುರವಿಲ್ಲ, ಗರ್ಭಗುಡಿ ಬಾಗಿಲುಗಳ ಬಂಧನವಿಲ್ಲ. ಬಯಲು ರಂಗಮಂದಿರದಂತೆ ಗಾಳಿ, ನೀರು, ಗಿಡ ಮರ, ಆಕಾಶಗಳಿಗೆ ಮುಕ್ತವಾಗಿ ತೆರೆದುಕೊಂಡಿರುವ ಇದು ಇರುವುದೇ ಎದುರು ಬದುರು ಇರುವ ಎರಡು ಪುಟ್ಟ ಬೆಟ್ಟಗಳ ತಪ್ಪಲಲ್ಲಿ. ಬೆಟ್ಟಗಳನ್ನು ಆವರಿಸಿಕೊಂಡಿರುವ ಗಿಡಗಳು, ಮೈ ತುಂಬ ಬಿಳಿ ಹೂ ಹೊತ್ತ ಮರಗಳು, ಹಳದಿ ಹೂಗಳ ಪೊದರುಗಳು, ಬಿಳಿಗಲ್ಲುಗಳ ಮೇಲೆ ಹರಿವ ಹಳ್ಳಗಳು, ಬಂಡೆಗಳೆಡೆಯಿಂದ ಸಳಸಳನೆ ಹರಿಯುತ್ತಾ ಧುಮುಕುವ ದಬದಬೆಗಳು. ಇವುಗಳೆಡೆಯಲ್ಲಿ ಎಲ್ಲೆಲ್ಲೂ ಇರುವ ಬೃಹತ್ ಬಂಡೆಗಳೆಲ್ಲವೂ ಶಿವನ ವದನವನ್ನು ಬಿಂಬಿಸುವ ಶಿವ ಸದನವೇ.

ತಲೆಯೆತ್ತಿ ನೋಡಬೇಕಾದ ಬಂಡೆಗಳೆಲ್ಲವೂ ಶಿಲ್ಪಿಯ ಉಳಿಯ ಕೌಶಲದಿಂದ ಬೆಟ್ಟದ ತಪ್ಪಲನ್ನು ಅಲಂಕರಿಸಿರುವ ಕಲಾಕೃತಿಗಳಾಗಿರುವ ಪರಿಗೆ ಬೆರಗಾಗುತ್ತೇವೆ. ಶಿಲ್ಪಕಲಾ ಕೌಶಲ, ಪ್ರಾಕೃತಿಕ ಐಸಿರಿಯ ಪರಸ್ಪರ ಜುಗಲಬಂದಿಯಂತಿದೆ. ಪರಸ್ಪರ ಚೆಲುವಿನ ಸ್ಪರ್ಧೆಯಂತಿದೆ.

ಈ ತೆರೆದ ಬಯಲ ಮರಳುಗಲ್ಲ ಶಿಲ್ಪಗಳಲ್ಲಿ ಎರಡು ವಿಧ. ಒಂದು